50 ಸುವರ್ಣ ಸಂಭ್ರಮ

# ನಿಮ್ಮೊಡನೆ

## ಸ್ವರೂಪ ಬದಲಾಗಲಿ

ಕರ್ನಾಟಕದ ಉಪಭಾಷೆಗಳ ಕೊಡುಗೆ, ಜಾಗತಿಕ ಇಂಗ್ಲಿಷ್ ಮೋಹವನ್ನು ಪರಿಣಾಮಕಾರಿಯಾಗಿ ಎದುರಿಸುವುದು ಹೇಗೆ ಎಂಬ ಬಗ್ಗೆ ಗುಣಾತ್ಮಕ ಚರ್ಚೆ ನಡೆಸಬಹುದಿತ್ತಲ್ಲವೆ? ಸಾಹಿತ್ಯ ಮತ್ತು ಭಾಷೆಯನ್ನು ಬೆಳೆಸುವವರು ಬರೇ ಕಥೆಗಾರರು, ಕವಿಗಳಲ್ಲ; ಸಿನಿಮಾದವರು, ರಂಗಭೂಮಿಯವರು, ಸಮೂಹ ಮಾಧ್ಯಮದವರು, ಮುಖ್ಯವಾಗಿ ಮಕ್ಕಳು ಕೂಡಾ ಸೇರಿದ್ದಾರೆ ಎನ್ನುವುದು ಕಸಾಪಕ್ಕೆ ಏಕೆ ಹೊಳೆಯಲಿಲ್ಲ?

ಕನ್ನಡ ಸಾಹಿತ್ಯ ಪರಿಷತ್ತಿಗೆ ಈಗ ನೂರು ವರ್ಷಗಳ ಸಂಭ್ರಮ. ಸಂಸ್ಥೆಯೊಂದರ ಇತಿಹಾಸದಲ್ಲಿ ನೂರು ವರ್ಷ ದಾಟುವುದೆಂದರೆ ಮಹತ್ವದ ಸಂಗತಿಯೇ. ನೂರಾರು ಹಿರಿಯ ಸಾಹಿತಿಗಳ ಬದ್ಧತೆ ಮತ್ತು ನಿಷ್ಕಾಮ ಶ್ರಮದಿಂದಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಬುನಾದಿ ಇವತ್ತು ಸಾಕಷ್ಟು ಭದ್ರವಾಗಿದೆ. ಕಸಾಪ ರಾಜ್ಯ ಮಟ್ಟದ ಸಮ್ಮೇಳನವೊಂದನ್ನು ನಡೆಸುತ್ತದೆ ಎಂದಾದಾಗ ಸಹಸ್ರಾರು ಕನ್ನಡಿಗರು ಉತ್ಸಾಹದಿಂದ ಬಂದು ಭಾಗವಹಿಸುತ್ತಾರೆ. ರಾಜ್ಯದ ಯಾವ ಮೂಲೆಯಲ್ಲಿ ಸಮ್ಮೇಳನ ನಡೆದರೂ ಸಾಹಿತ್ಯಾಸಕ್ತರು ನುಗ್ಗಿ ಬರುತ್ತಾರೆ. ಆದರೆ ಕನ್ನಡಿಗರ, ಸಾಹಿತ್ಯಾಸಕ್ತರ ಈ ಸಂಭ್ರಮ, ನಿರೀಕ್ಷೆಗೆ ತಕ್ಕಂತೆ ನಮ್ಮ ಸಮ್ಮೇಳನಗಳು ನಡೆಯುತ್ತಿವೆಯೆ.. ಎನ್ನುವುದು ವಿಚಾರ ಮಾಡಬೇಕಾದ ಸಂಗತಿ. ನೂರರ ಹರೆಯದ ಕನ್ನಡ ಸಾಹಿತ್ಯ ಪರಿಷತ್ತು ಈ ಸಲ ಮಡಿಕೇರಿಯಲ್ಲಿ ನಡೆಸಿದ 80ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಗುಣಮಟ್ಟವನ್ನು ಗಮನಿಸಿದಾಗ, ಖಂಡಿತಾ ನಿರಾಶೆ ಮೂಡುತ್ತದೆ. ಒತ್ತಡಕ್ಕೆ ಮಣಿದು ಕವಿಗಳನ್ನು ಆಯ್ಕೆ ಮಾಡುವುದು, ಖ್ಯಾತಿ ಇದೆಯೆಂಬ ಒಂದೇ ಕಾರಣಕ್ಕೆ ಸಾಹಿತಿಗಳ ಭಾಷಣ ಏರ್ಪಡಿಸುವುದು, ವಿಚಾರ ಸಂಕಿರಣಗಳಿಗೆ ವಿಷಯ ಆಯ್ಕೆ ಮಾಡುವಾಗ ಸಮಕಾಲೀನತೆಯನ್ನು ಮರೆತುಬಿಡುವುದು, ಸಮ್ಮೇಳನದ ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಮಾತ್ರ ಮೆರೆಸಿ ಅವರ ಆಶಯಗಳ ವಿರುದ್ಧವೇ ನಿರ್ಣಯಗಳನ್ನು ಕೈಗೊಳ್ಳುವುದು, ಊಟ ತಿಂಡಿಯ ಗದ್ದಲ, ಹಣಕ್ಕಾಗಿ ಸರಕಾರದ ಜತೆಗೆ ಗುದ್ದಾಟ!– ಎಲ್ಲದಕ್ಕೂ ಈ ಸಲದ ಸಮ್ಮೇಳನ ಸಾಕ್ಷಿಯಾಗಿದೆ. ಅಖಿಲ ಭಾರತ ಮಟ್ಟದ ಸಾಹಿತ್ಯ ಸಮ್ಮೇಳನದ ಜಾತ್ರೆಯ ಸ್ವರೂಪವನ್ನು ಬದಲಾಯಿಸಬೇಕಾದ ಅನಿವಾರ್ಯ ಕಾಲಘಟ್ಟದಲ್ಲಿ ನಾವಿದ್ದೇವೆ ಎನ್ನುವುದನ್ನು ಮಡಿಕೇರಿ ಸಮ್ಮೇಳನ ಒತ್ತಿ ಹೇಳಿದೆ.

99 ವರ್ಷಗಳ ಅವಧಿಯಲ್ಲಿ ನಡೆಸಿದ 79 ಸಮ್ಮೇಳನಗಳಲ್ಲಿ ಕಂಡುಕೊಂಡ ಅನುಭವ ಇಲ್ಲಿ ಕೆಲಸಕ್ಕೇ ಬರಲಿಲ್ಲವೆ? ಈ ಅಪಾರ ಅನುಭವದ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಬೆಳವಣಿಗೆ, ಕರ್ನಾಟಕದ ಉಪಭಾಷೆಗಳ ಕೊಡುಗೆ, ಜಾಗತಿಕ ಇಂಗ್ಲಿಷ್ ಮೋಹವನ್ನು ಪರಿಣಾಮಕಾರಿಯಾಗಿ ಎದುರಿಸುವುದು ಹೇಗೆ ಎಂಬ ಬಗ್ಗೆ ಗುಣಾತ್ಮಕ ಚರ್ಚೆ ನಡೆಸಬಹುದಿತ್ತಲ್ಲವೆ? ಸಾಹಿತ್ಯ ಮತ್ತು ಭಾಷೆಯನ್ನು ಬೆಳೆಸುವವರು ಬರೇ ಕಥೆಗಾರರು, ಕವಿಗಳಲ್ಲ; ಸಿನಿಮಾದವರು, ರಂಗಭೂಮಿಯವರು, ಸಮೂಹ ಮಾಧ್ಯಮದವರು, ಮುಖ್ಯವಾಗಿ ಮಕ್ಕಳು ಕೂಡಾ ಸೇರಿದ್ದಾರೆ ಎನ್ನುವುದು ಕಸಾಪಕ್ಕೆ ಏಕೆ ಹೊಳೆಯಲಿಲ್ಲ? ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರ ಸಾಹಿತ್ಯಕ್ಕೆ ಸಂಬಂಧಿಸಿದ ಪರಿಷತ್ತಿನ ನಿರ್ಲಕ್ಷ್ಯ ಈ ಸಲದ ಸಮ್ಮೇಳನದಲ್ಲಿ ಎದ್ದು ಕಂಡಿತು. ಬಹುತೇಕ ಮಹಿಳೆಯರು ಊಟದ ಮನೆಯಲ್ಲಿ ಪರಿಚಾರಿಕೆಯರಾಗಿ, ಮೇಲ್ವಿಚಾರಕರಾಗಿ ದುಡಿಯುವುದೇ ದೊಡ್ಡದು ಎಂದು ಸಂಘಟಕರು ಭಾವಿಸಿದ್ದಾರೆಯೆ?

ಪ್ರತಿ ಸಲದಂತೆ ಈ ಸಲವೂ ಸರಕಾರದ ಮುಖ್ಯಸ್ಥರು ಉದ್ಘಾಟನೆಯಲ್ಲಿ ಭಾಗವಹಿಸಿದ್ದಾರೆ. ಕನ್ನಡದ ಕೆಲಸಕ್ಕೆ, ಭಾಷೆಯ ಉಳಿವು, ಉತ್ಥಾನಕ್ಕೆ ಇವತ್ತು ಸರಕಾರದ ಬೆಂಬಲ ಬೇಕೇ ಬೇಕು. ಹಾಗೆಂದು ಕನ್ನಡದ ಕೆಲಸಕ್ಕೆ ಹಣ ಬೇಡುವುದಷ್ಟಕ್ಕೇ ಈ ಬೆಂಬಲ ಸೀಮಿತವಾಗಬಾರದು. ಕಸಾಪ ವನ್ನು ಸರ್ಕಾರದ ನೆರವಿಲ್ಲದೆ ಬೆಳೆಸುವ ಬಗ್ಗೆಯೂ ನಿರ್ದಿಷ್ಟ ಯೋಜನೆಗಳನ್ನು ರೂಪಿಸಬೇಕು. ಅಂದ ಹಾಗೆ, ನಾಡು ನುಡಿಯ ಹೆಮ್ಮೆಯ ಈ ಸಮ್ಮೇಳನದಲ್ಲಿ ಸ್ವಂತ ಆಸಕ್ತಿಯಿಂದ ಎಷ್ಟು ಮಂದಿ ಶಾಸಕರು ಭಾಗವಹಿಸಿದ್ದಾರೆ ಎಂದು ನೋಡಿದರೆ, ದೊಡ್ಡ ಶೂನ್ಯ ಎದ್ದು ಕಾಣುತ್ತದೆ!

ನಮ್ಮ ಇತ್ತೀಚಿನ ಎಲ್ಲ ಸರಕಾರಗಳೂ ಇಂಗ್ಲಿಷ್ ಶಾಲೆಗಳಿಗೆ ದಿಡ್ಡೀ ಬಾಗಿಲು ತೆರೆದಿಟ್ಟುಕೊಂಡೇ ಕುಳಿತಿವೆ. ಇಂಗ್ಲಿಷ್ ಮಾಧ್ಯಮದ ದುಬಾರಿ ಶಾಲೆಗಳು ಕನ್ನಡಿಗರನ್ನು ಸುಲಿಗೆ ಮಾಡುತ್ತಿವೆ. ಅದಕ್ಕೆ ಪರ್ಯಾಯವಾಗಿ ಅತ್ಯುತ್ತಮ ಕನ್ನಡ ಶಾಲೆಗಳನ್ನು ರೂಪಿಸುವ ಕೆಲಸ ಸರಕಾರದಿಂದ ನಡೆಯಬೇಕಿತ್ತು. ಈ ನಿಟ್ಟಿನಲ್ಲಿ ಸಮ್ಮೇಳನದಲ್ಲಿ ಯಾವ ಗುಣಾತ್ಮಕ ಚರ್ಚೆಯೂ ನಡೆಯಲಿಲ್ಲ. ಭಾಷೆ ಮತ್ತು ಸಾಹಿತ್ಯದ ಉಳಿವು, ಉತ್ಥಾನಕ್ಕಾಗಿ ಕೆಲಸ ಮಾಡಬೇಕಾದ ಅಕಾಡೆಮಿಗಳು ಕೈ, ಬಾಯಿಗಳನ್ನು ಕಳೆದುಕೊಂಡು ಮೂಲೆ ಸೇರಿವೆ. ಯಾವೊಬ್ಬ ಕಸಾಪ ಪ್ರತಿನಿಧಿಯೂ ಈ ಬಗ್ಗೆ ಮುಖ್ಯಮಂತ್ರಿಯವರನ್ನು ಪ್ರಶ್ನೆ ಮಾಡಲಿಲ್ಲ. ಹೀಗೆಯೇ ಮುಂದುವರಿದರೆ ಸಾಹಿತ್ಯ ಸಮ್ಮೇಳನಗಳು ಅರ್ಥಹೀನ ಎಂದು ಎಲ್ಲರಿಗೂ ಅನ್ನಿಸುವ ಕಾಲ ದೂರವಿಲ್ಲ. ಹಾಗಾಗುವುದಕ್ಕೆ ಮುಂಚೆಯೇ ಕಸಾಪ ಎಚ್ಚತ್ತು ಸಮ್ಮೇಳನದ ಸ್ವರೂಪವನ್ನು ಬದಲಿಸುವುದು ಒಳ್ಳೆಯದು. ಇಲ್ಲದಿದ್ದಲ್ಲಿ ಇಂತಹ ಸಮ್ಮೇಳನಗಳು ಕೇವಲ 'ಓಓಡಿ ಲೋಭಿ ಸರಕಾರಿ ನೌಕರರ ಜಾತ್ರೆ'ಯಷ್ಟೇ ಆದೀತು.

■ ಬಿ.ಎಂ.ಹನೀಫ್



ಈಶ್ವರ್